**Order Sheet**
**In the Court Of: PRL. CIVIL JUDGE AND JMFC BELAGAVI AT BELGAUM**
**F.R.No:O.S./758/2012**
**Case Reg.No: O.S./758/2012**

| **Plaintiff** | VERSUS | **Defendent** |
|---|---|---|
| **1)BHAIRU SO. DEVAPPA PATIL &5 others** | | **1)MARUTI SO. BALUMARGANACHE &2 others** |
| **2)PEERAJI SO. DEVAPPA PATIL**<br>**3)PARASHURAM SO. DEVAPPA PATIL**<br>**4)LAXMAN SO. DEVAPPA PATIL**<br>**5)MALLAPPA SO. DEVAPPA PATIL** | | **2)PARASHURAM SO. BALU MARGANACHE** |

ಸಾಕ್ಷಿಯನ್ನು ದಿಃ 03-08-2016 ರಂದು ಕರೆಯಿಸಿ ಪ್ರಮಾಣ ಬೋಧಿಸಲಾಯಿತು.
ಮುಂದುವರಿದ ಪಾಟೀ ಸವಾಲು ಃ ಶ್ರೀ ಎ ಜೆ ಕೆ ವಾದಿಪರ ವಕೀಲರಿಂದ.

ನಾವು ಮಾಡಿಕೊಂಡಿರುವ ಮೂಲ ಖರೀದಿ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದರೆ ನಿಜಸ್ಥಿತಿ ಗೊತ್ತಾಗುತ್ತದೆ ಎನ್ನುವ ದುರುದ್ದೇಶದಿಂದ ಸದರೀ ಮೂಲ ಖರೀದಿ ಕರಾರು ಪತ್ರವನ್ನು ಉದ್ದೇಶಪೂರ್ವಕವಾಗಿ ಹಾಜರು ಮಾಡಿಲ್ಲ ಎಂದರೆ, ಸಾಕ್ಷಿದಾರರು ಅದನ್ನು ಬೇರೆ ನ್ಯಾಯಾಲಯದಲ್ಲಿ ಹಾಜರು ಮಾಡಿದ್ದೇನೆಂದು ಹೇಳುತ್ತಾರೆ. ಸದರೀ ಖರೀದಿ ಕರಾರು ಪತ್ರ ನೋಂದಣಿ ಆಗಿರುವುದಿಲ್ಲ ಎಂದರೆ ನಿಜ. ವಾದಿಯವರ ತಂದೆಯವರು ನಮ್ಮ ತಂದೆಗೆ ಯಾವುದೇ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರೀ ಖರೀದಿ ಕರಾರಿನಲ್ಲಿ ವಾದಿಯ ತಂದೆಯ ಸಹಿಯಾಗಲೀ, ಹೆಬ್ಬೆಟ್ಟಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ. ಹೀಗೆ ವಾದಿಯವರ ತಂದೆಯವರ ಹೆಬ್ಬೆಟ್ಟಾಗಲೀ, ಸಹಿಯಾಗಲೀ ಮಾಡದಿರುವ ಕಾರಣವೇ ಆ ಕರಾರು ಪತ್ರವನ್ನು ಮುದ್ದಾಮಾಗಿ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ, ಸಾಕ್ಷಿದಾರರು ಮುಂದೆ ಹಾಜರು ಮಾಡುತ್ತೇನೆಂದು ಹೇಳುತ್ತಾರೆ. ಎಂ ಎ ನಂಬರ್ 119-2012 ಇನ್ನು ಚಾಲ್ತಿಯಲ್ಲಿದೆಯೋ, ಪೂರ್ಣಗೊಂಡಿದೆಯೋ ನನಗೆ ಗೊತ್ತಿಲ್ಲ. ವಾದಿಯು ಈ ದಾವೆಯನ್ನು ದಾಖಲೆ ಮಾಡಿದ ನಂತರ ಅಸಲು ದಾವೆ ನಂಬರ್ 725-2013 ದಾವಯನ್ನು ನಾವು ಹೂಡಿದ್ದೇವೆಂದರೆ ನಿಜ. ವಾದಿಯವರು ಈ ದಾವೆಯನ್ನು ಹೂಡಿದ ನಂತರ ಖರೀದಿ ಕರಾರು ಪತ್ರ ಎಂದು ಹೇಳಲಾದ ಪತ್ರವನ್ನು ಸೃಷ್ಟೀಕರಣ ಮಾಡಿ ಆ ದಾವೆಯಲ್ಲಿ ಹಾಜರು ಮಾಡಿರುತ್ತೇನೆಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ದಾವಾ ಆಸ್ತಿಯ ಮಾಲೀಕರು ಇರುತ್ತಾರೆ ಎನ್ನುವ ಪ್ರಶ್ನೆಗೆ, ಸಾಕ್ಷಿದಾರರು ನಮ್ಮ ತಂದೆಯವರು ಮಾಲೀಕರಿರುತ್ತಾರೆಂದು ಹೇಳುತ್ತಾರೆ. ದಾವಾ ಆಸ್ತಿಯ ಖಬ್ಜೆಯು ಸಹ ವಾದಿಯ ಹತ್ತಿರ ಇರುತ್ತದೆಂದರೆ, ಸಾಕ್ಷಿದಾರರು ನಮ್ಮ ಖಬ್ಜೆಯಲ್ಲಿರುತ್ತದೆಂದು ಹೇಳುತ್ತಾರೆ.

ನನ್ನ ತಂದೆಯ ಜೀವಂತ ಅವಧಿಯಲ್ಲಿ ದಾವಾ ಆಸ್ತಿಯು ಅವರ ಖಬ್ಜೆಯಲ್ಲಿರುತ್ತದೆಂದು ತೋರಿಸಲು ಯಾವುದೇ ಕಾಗದಪತ್ರಗಳನ್ನು ಹಾಜರು ಮಾಡಿಲ್ಲ ಎನ್ನುವ ಪ್ರಶ್ನೆಗೆ, ಸಾಕ್ಷಿದಾರರು ತಲಾಟಿಯವರು ಮಾಡಿರುವ ಪಂಚನಾಮೆಯನ್ನು ಹಾಜರು ಮಾಡಿದ್ದೇನೆಂದು ಹೇಳುತ್ತಾರೆ. ನಾವು ಹೂಡಿರುವ ಅಸಲು ದಾವೆ ಸಂಖ್ಯೆ 725-2013 ಸಮಯದಲ್ಲೇ ಸದರೀ ಗ್ರಾಮ ಲೆಕ್ಕಾಧಿಕಾರಿಗಳು ದಾವೆ ಆಸ್ತಿಯ ಪಂಚನಾಮೆಯನ್ನು ಮಾಡಿರುತ್ತಾರೆಂದು ಹೇಳುತ್ತಾರೆ. ಈ ರೀತಿ ಗ್ರಾಮ ಲೆಕ್ಕಾಧಿಕಾರಿಗೆ ದಾವಾ ಆಸ್ತಿಯ ಪಂಚನಾಮೆ ಮಾಡಲು ಆದೇಶ ಯಾರು ಮಾಡಿದರು ಎನ್ನುವ ಪ್ರಶ್ನೆಗೆ, ಸಾಕ್ಷಿದಾರರು 1ನೇ ಹೆಚ್ಚುವರಿ ದಿವಾಣಿ ನ್ಯಾಯಾಲಯದ ಆದೇಶದ ಪ್ರಕಾರ ಪಂಚನಾಮೆ ಮಾಡಿರುತ್ತಾರೆಂದು ಹೇಳುತ್ತಾರೆ. ಸದರೀ ಆದೇಶ ನನ್ನ ಬಳಿ ಇರುತ್ತದೆ ಅದನ್ನು ಮುಂದೆ ಹಾಜರು ಮಾಡುತ್ತೇನೆ. ಯಾವುದೇ ನ್ಯಾಯಾಲಯದಲ್ಲಿ ಈ ರೀತಿ ಪಂಚನಾಮೆ ಆದೇಶ ಆಗದಿದ್ದರೂ ಸಹ ತಲಾಟಿಯವರು ಪಂಚನಾಮ ಮಾಡಿದ್ದಾರೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗೆ ಮತ್ತು ನನಗೆ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ದಾವಾ ಆಸ್ತಿಯು ನಮ್ಮ ಖಬ್ಜೆಯಲ್ಲಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯ ಖಬ್ಜಕ್ಕೆ ಅಡಚಣೆ ಮಾಡುವ ದುರುದ್ದೇಶದಿಂದ ನನ್ನ ಖಬ್ಜೆ ಇದೆ ಎಂದು ಅವರ ಖಬ್ಜಕ್ಕೆ ತೊಂದರೆ ನೀಡುತ್ತಿದ್ದೇನೆಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ಹೀಗೆ ಮಾಡಿರುವ ಪ್ರಯತ್ನದಿಂದಲೇ ವಾದಿಯು ಈ ದಾವೆಯನ್ನು ಹೂಡಿರುತ್ತಾರೆಂದರೆ ಸರಿಯಲ್ಲ.

ಮರು ವಿಚಾರಣೆ ಏನೂ ಇಲ್ಲ.

(ತೆ. ನ್ಯಾ. ಸಾಕ್ಷಿಯ ಹೇಳಿಕೆಯ ಮೇರೆಗೆ ಗಣಕೀಕೃತದಿಂದ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

ಸಹಿ/-
4ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಲಯ, ಬೆಳಗಾವಿ.